# ಹೊಸತು



## ಟಪ್ಪರ್‌ವೇರ್ ಫ್ರೀಡಂ ಬಾಟಲಿ

ಆಹಾರ ಶೇಖರಣಾ ವಸ್ತುಗಳ ತಯಾರಿಕೆಗೆ ಹೆಸರಾದ ಟಪ್ಪರ್‌ವೇರ್ ಕಂಪೆನಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆಪವಾಗಿಟ್ಟುಕೊಂಡು 'ಫ್ರೀಡಂ ಬಾಟಲ್ಸ್' ಹೆಸರಿನ ವಾಟರ್ ಬಾಟಲಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಬೆಲೆ 260 ರೂಪಾಯಿ. www.tupperware.co.in




## ಹೊಸ ಸ್ವಾದದಲ್ಲಿ ಚಹಾಪುಡಿ

ಪಾನೀಯ ಉತ್ಪನ್ನಗಳಿಗೆ ಹೆಸರಾದ ಕಂಪೆನಿ ಟಿ – ಎ – ಮಿ ಇದೀಗ ಕಿತ್ತಳೆ, ಪುದಿನ, ಸ್ಟ್ರಾಬೆರ್ರಿ ಸ್ವಾದಗಳಲ್ಲಿ ಚಹಾ ಪುಡಿ ತಂದಿದೆ. ಹೊಸ ಸ್ವಾದದ ಟೀ ಪುಡಿ ಗ್ರಾಹಕರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ವಿಶ್ವಾಸ ವ್ಯಕ್ತಪಡಿಸಿದೆ. ಬೆಲೆ 225 ರೂಪಾಯಿ. ಮಾಹಿತಿಗೆ: 7795213926




## ಕ್ಲೆಂಜ್‌ನಿಂದ ಸ್ಯಾನಿಟೈಸರ್

ಸೌಂದರ್ಯ ವರ್ಧಕ ಉತ್ಪನ್ನಗಳಿಗೆ ಹೆಸರಾದ ಕಂಪೆನಿ ಕ್ಲೆಂಜ್ ಸ್ಯಾನಿಟೈಜರ್ ಅನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದೆ. ಇದು ಕೀಟಾಣುಗಳಿಂದ ರಕ್ಷಣೆ ನೀಡುವುದಲ್ಲದೆ, ಬ್ಯಾಕ್ಟೀರಿಯಾ ಮುಕ್ತಗೊಳಿಸುತ್ತದೆ. ಹ್ಯಾಂಡಿಯಾಗಿದ್ದು, ಎಲ್ಲ ಕಡೆ ಒಯ್ಯಬಹುದು ಎಂದು ಕಂಪೆನಿ ಹೇಳಿದೆ. ಬೆಲೆ 45 ರೂಪಾಯಿ. www.klenza.in




## ಪ್ಯಾನಸಾನಿಕ್ ಮೈಕ್ರೊವೇವ್

ಮೊಬೈಲ್ ಇನ್ನಿತರ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಪ್ಯಾನಸಾನಿಕ್ ಇಂಡಿಯಾ ಕಂಪೆನಿ ಹೊಸದಾಗಿ ಸೋಲೋ ಮೈಕ್ರೊವೇವ್ ಅನ್ನು ಪರಿಚಯಿಸಿದ್ದು, ಎರಡು ಮಾದರಿಗಳಲ್ಲಿ ಸಿಗುತ್ತವೆ. ಇವು ಮೆಕ್ಯಾನಿಕಲ್ ಮತ್ತು ಡಿಜಿಟಲ್ ನಿಯಂತ್ರಕಗಳನ್ನು ಹೊಂದಿದ್ದು, ಅಡುಗೆಗೆ ಬೇಕಾದ ರೀತಿ ಹೊಂದಿಸಿಕೊಳ್ಳಬಹುದಾಗಿದೆ ಎಂದು ಕಂಪೆನಿ ಹೇಳಿದೆ. ಬೆಲೆ 5790 ರೂಪಾಯಿ. www.panasonic.com

## ಪೆರ್ಗ್‌ನಿಂದ ನೆಲಹಾಸು

ಫ್ಲೋರಿಂಗ್ ಉತ್ಪನ್ನಗಳ ತಯಾರಿಕೆಗೆ ಹೆಸರಾದ ಪೆರ್ಗ್‌ಕಂಪೆನಿ 'ಸೆನ್ಸೇಷನ್' ಹೆಸರಿನ ನೆಲಹಾಸನ್ನು ಪರಿಚಯಿಸಿದೆ. ಇದು ನೋಡಲು ಆಕರ್ಷಕವಾಗಿರುವುದಲ್ಲದೆ, ಓಡಾಡಲೂ ಅನುಕೂಲಕರವಾಗಿದೆ. ನೀರು ಚೆಲ್ಲಿದರೂ ಜಾರುವುದಿಲ್ಲ ಎಂಬುದು ಕಂಪೆನಿ ವಿವರಣೆ. www.pergo.co.in





## ಲೆದರ್ ಜಾಕೆಟ್

ಉಡುಪುಗಳ ತಯಾರಿಕೆಗೆ ಹೆಸರಾದ ಕಂಪೆನಿ ಫ್ಲಾಬೆಲ್ಲ ಮಹಿಳೆಯರಿಗಾಗಿ ಲೆದರ್ ಜಾಕೆಟ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕೆಂಪು, ಕಪ್ಪು, ಚಾಕೊಲೇಟ್ ಬಣ್ಣಗಳಲ್ಲಿ ಲಭ್ಯವಿದ್ದು, ಮಹಿಳೆಯರಿಗೆ ಮೆಚ್ಚುಗೆಯಾಗಲಿದೆ ಎಂದು ಕಂಪೆನಿ ಹೇಳಿದೆ. ಬೆಲೆ 3000 ದಿಂದ ಆರಂಭ. ashruti@actimediaindia.com